## - ಉಡುಪಿ ನಗರಸಭೆ -

ಉನಸ.ಏಇ.ಸಿಆರ್.ಕೊಪ್ರಾ/2008-09 ದಿನಾಂಕ 07.07.2008

### ಕೊಟೇಶನ್ ಪ್ರಕಟಣೆ

ಉಡುಪಿ ನಗರಸಭಾ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ಕುಸಿದು ಹೋದ ಮೋರಿಗಳ ಸುಮಾರು 50 ಸಂಖ್ಯೆಯ ಆರ್.ಸಿ.ಸಿ. ಸ್ಲ್ಯಾಬ್‌ನ್ನು ತೆಗೆದು ಹೊಸ ಸ್ಲ್ಯಾಬನ್ನು ತಯಾರಿಸಿ ಅಳವಡಿಸುವ ಬಗ್ಗೆ ಅರ್ಹ ಏಜೆನ್ಸಿಯವರಿಂದ ಕೊಟೇಶನನ್ನು ಆಹ್ವಾನಿಸಲಾಗಿದೆ. ಪೌರಾಯುಕ್ತರು ಅಥವಾ ಇವರಿಂದ ಅಧಿಕಾರ ಹೊಂದಿದವರು ದಿನಾಂಕ 27.07.2008 ರಂದು 4.00 ಗಂಟೆಯವರೆಗೆ ಕೊಟೇಶನನ್ನು ಸ್ವೀಕರಿಸಲಿರುವರು. ರೂ. 250-00 ನ್ನು ನಗರಸಭೆಗೆ ಪಾವತಿಸಿ ಅರ್ಜಿ ನೀಡಿ ದಿನಾಂಕ 26.07.2008ರ ವರೆಗೆ ಕೊಟೇಶನ್ ನಮೂನೆಯನ್ನು ಪಡೆದುಕೊಳ್ಳಬಹುದು. ಕೊಟೇಶನ್ ನೊಂದಿಗೆ ರೂ. 2000-00 ಮೊತ್ತದ. ಇ.ಎಂ.ಡಿ. ಯನ್ನು ಡಿ.ಡಿ.ರೂಪದಲ್ಲಿ ಲಗ್ತೀಕರಿಸತಕ್ಕದ್ದು. ಬಂದಿರುವ ಕೊಟೇಶನನ್ನು ದಿನಾಂಕ 27.07.2008 ರಂದು ಅಥವಾ ಸೂಕ್ತ ದಿನದಂದು ಹಾಜರಿರುವ ಗುತ್ತಿಗೆದಾರರ ಸಮಕ್ಷಮ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಕೇಳಿ ಪಡೆದುಕೊಳ್ಳಬಹುದು.

### - ಷರತ್ತುಗಳು -

1) ಕೊಟೇಶನ್‌ನಲ್ಲಿ ಭಾಗವಹಿಸುವ ಏಜೆನ್ಸಿದಾರರು ಪರವಾನಿಗೆಯ ಯಾ ವಿಳಾಸ ದೃಢೀಕರಿಸುವ ಸೂಕ್ತ ದಾಖಲೆಯ ಪ್ರತಿಯನ್ನು ಲಗತ್ತಿಸತಕ್ಕದ್ದು.
2) ಕಾಮಗಾರಿಯನ್ನು ಆದೇಶ ನೀಡಿದ 15 ದಿವಸಗಳ ಒಳಗೆ ಕೈಗೊಳ್ಳತಕ್ಕದ್ದು.
3) ಯಾವುದೇ ಸಂದರ್ಭಗಳಲ್ಲಿಯೂ ಮುಂಗಡ ಹಣ ನೀಡಲಾಗುವುದಿಲ್ಲ.
4) ಬಳಸುವ ಎಲ್ಲಾ ವಸ್ತುಗಳು ಉತ್ತಮ ಗುಣಮಟ್ಟದ್ದಾಗಿರಬೇಕು.
5) ಕೊಟೇಶನ್‌ದಾರರು ಎಲ್ಲಾ ಕರಗಳನ್ನು ಸೇರಿಸಿ ದರಗಳನ್ನು ಸೂಚಿಸತಕ್ಕದ್ದು.
6) ಪಾವತಿ ಬಿಲ್ಲಿನಿಂದ ಸರಕಾರಕ್ಕೆ ಸಲ್ಲತಕ್ಕ ಎಲ್ಲಾ ಕರಗಳನ್ನು ಮತ್ತು ಭದ್ರತಾ ಠೇವಣಿಯನ್ನು ಕಡಿತಗೊಳಿಸಲಾಗುವುದು. ಭದ್ರತಾ ಠೇವಣಿಯನ್ನು ಒಂದು ವರ್ಷದ ಅವಧಿ ಮುಗಿದ ಮೇಲೆ ನಿಬಡ್ಡಿಯಾಗಿ ಹಿಂದಿರುಗಿಸಲಾಗುವುದು.
7) ಯಾವುದೇ ಕೊಟೇಶನನ್ನು ಅಂಗೀಕರಿಸುವ ಯಾ ತಿರಸ್ಕರಿಸುವ ಹಕ್ಕನ್ನು ಕಾದಿರಿಸಲಾಗಿದೆ.
8) ಯಶಸ್ವಿ ಕೊಟೇಶನ್‌ದಾರರು ಶರತ್ತುಗಳಿಗೆ ಒಪ್ಪಿ ರೂ. 50-00ರ ಛಾಪಾ ಪತ್ರದಲ್ಲಿ ಕರಾರು ಪತ್ರವನ್ನು ಏರ್ಪಡಿಸಿಕೊಳ್ಳತಕ್ಕದು.
9) ಕೊಟೇಶನ್‌ದಾರರು ನಿಗಧಿತ ಅವಧಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ವಿಫಲರಾದಲ್ಲಿ ಇವರ ಟೆಂಡರನ್ನು ರದ್ದುಪಡಿಸಿ ಇ.ಎಂ.ಡಿ. ಯನ್ನು ಮುಟ್ಟುಗೋಲು ಹಾಕಿಕೊಂಡು ಕಾಮಗಾರಿಯನ್ನು ಕೈಗೊಳ್ಳಲು ಸೂಕ್ತ ಕ್ರಮ ಕೈಗೊಂಡು ಹೆಚ್ಚುವರಿ ಯಾಗುವ ಮೊತ್ತವನ್ನು ವಸೂಲಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.
10) ತಿರಸ್ಕೃತ ಕೊಟೇಶನ್‌ದಾರರ ಇ.ಎಂ.ಡಿ. ಯನ್ನು ಕೊಟೇಶನ್ ಮಂಜೂರಾತಿಗೊಂಡ ಬಳಿಕ ಇಲ್ಲವೇ 90 ದಿವಸಗಳ ಒಳಗೆ ಯಾವುದು ಮೊದಲು ಆಗುವುದೋ ಇದರಂತೆ ನೀಡಲಾಗುವುದು.
11) ಕಾಮಗಾರಿಯನ್ನು ಕಿರಿಯ ಇಂಜಿನಿಯರ್ – ಸಹಾಯಕ ಕಾರ್ಯಪಾಲಕ ಅಭಿಯಂತರರ ಸುಪರ್ದಿನಲ್ಲಿ ಕೈಗೊಳ್ಳತಕ್ಕದ್ದು.
12) ಒಟ್ಟು ಸುಮಾರು 1.50 X 0.45 X 0.20 ಅಳತೆಯ 30 ಸಂಖ್ಯೆಯ ಮತ್ತು 1.50 X 0.45 X 0.15 ಅಳತೆಯ 20 ಸಂಖ್ಯೆಯ ಸ್ಲ್ಯಾಬ್‌ಗಳ ಅಗತ್ಯತೆ ಇದೆ.
13) ಅಗತ್ಯ ಬಿದ್ದಲ್ಲಿ ಮಂಜೂರಾದ ದರದಲ್ಲಿ ಹೆಚ್ಚಿನ ಸಂಖ್ಯೆಯ ಸ್ಲ್ಯಾಬನ್ನು ತಯಾರಿಸಿ ಒದಗಿಸಲು ಬದ್ಧರಿರತಕ್ಕದ್ದು.

ಸಹಿ/-
ಅಧ್ಯಕ್ಷರು
ಉಡುಪಿ ನಗರಸಭೆ

ಸಹಿ/-
ಪೌರಾಯುಕ್ತರು
ಉಡುಪಿ ನಗರಸಭೆ

ಪೌರ ಆಯುಕ್ತರು,
ನಗರ ಸಭೆ, ಉಡುಪಿ
14/7/08